/

ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/107/2015-16 ದಿನಾಂಕ:12-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಕೊರವರ ಹನುಮಂತಪ್ಪ ತಂದೆ ಲೇಟ್ ಭೀಮಯ್ಯ<br>2)ಕೊರವರ ಶಿವಣ್ಣ ತಂದೆ ಲೇಟ್ ಭೀಮಯ್ಯ<br>ಸೂಲದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 853ಪೈಕಿ ವಿಸ್ತೀರ್ಣ 1-78 ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 853ಪೈಕಿ ವಿಸ್ತೀರ್ಣ 1-78 ಎಕ್ರೆ ಜಮೀನನ್ನು ಸದರಿ ಗ್ರಾಮದ ಕೊರವರ ಹನುಮಂತಪ್ಪ ತಂದೆ ಲೇಟ್ ಭೀಮಯ್ಯ, ಕೊರವರ ಶಿವಣ್ಣ ತಂದೆ ಲೇಟ್ ಭೀಮಯ್ಯ. ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸೂಲದಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 07-12-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ವಂಶವೃಕ್ಷ ಹಾಗೂ ಮರಣ ಪ್ರಮಾಣ ಪತ್ರಗಳನ್ನು ದೃಡಿಕರಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್ ನಂ: 25/2015-16. ದಿನಾಂಕ: 08-01-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 22-03-2016 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಸೂಲದಹಳ್ಳಿ ಗ್ರಾಮದ ಸನಂ 853ಪೈಕಿ ವಿಸ್ತೀರ್ಣ 1-78 ಎಕ್ರೆ ಜಮೀನು ನಮ್ಮ ದೊಡ್ಡಪ್ಪನವರಾದ ಕೊರವರ ಹೊನ್ನೂರಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 06-08-2005 ರಂದು ಹಾಗೂ ನಮ್ಮ ದೊಡ್ಡಮ್ಮಳಾದ ಕೊರವರ ತಿಮ್ಮಕ್ಕ ಗಂಡ ಹೊನ್ನೂರಪ್ಪ. ಇವರು ದಿನಾಂಕ 09-03-2003 ರಂದು ನಿಧನ ಹೊಂದಿರುತ್ತಾರೆ. ಇವರಿಗೆ ಸಂತಾನ ಇರುವುದಿಲ್ಲ ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಲಾಗಿ ಅರ್ಜಿದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸಿರುವುದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ **ಕೂಡ್ಲಿಗಿ ತಾಲೂಕು** ಸೂಲದಹಳ್ಳಿ ಗ್ರಾಮದ ಸನಂ 853ಪೈಕಿ ವಿಸ್ತೀರ್ಣ 1–78 ಎಕ್ರೆ ಜಮೀನನ್ನು **ಪೋತಿವಾರಸು ಹಕ್ಕಿನ** ಪ್ರಕಾರ ಅರ್ಜಿದಾರರಾದ ಕೊರವರ ಹನುಮಂತಪ್ಪ ತಂದೆ ಲೇಟ್ ಭಿಮಯ್ಯ. ಕೊರವರ ಶಿವಣ್ಣ ತಂದೆ ಲೇಟ್ ಭೀಮಯ್ಯ ಸೂಲದಹಳ್ಳಿ ಗ್ರಾಮ ಇವರ ಹೆಸರಲ್ಲಿ ಜಂಟಿಯಾಗಿ ಹಕ್ಕ ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

**ಉಪತಹಶೀಲ್ದಾರರು**
**ನಾಡಕಛೇರಿ ಹೊಸಹಳ್ಳಿ**

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೊರವರ ಹನುಮಂತಪ್ಪ ತಂದೆ ಲೇಟ್ ಭಿಮಯ್ಯ. ಕೊರವರ ಶಿವಣ್ಣ ತಂದೆ ಲೇಟ್ ಭೀಮಯ್ಯ ಸೂಲದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.